ಮಕ್ಕಳಿಗೆ ರಾತ್ರಿ ವಸತಿಯನ್ನೂ ನೀಡುವ ಶಾಲೆ

ಅಚ್ಚಪ್ಪ ಗೌಡರ್

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜುಮಾಲ್ಪುರ ದೊಡ್ಡ ತಾಂಡಾ

ಸುರಪುರ ಬ್ಲಾಕ್, ಯಾದಗಿರಿ ಜಿಲ್ಲೆ, ಕರ್ನಾಟಕ

ಜುಮಾಲ್ಪುರ ದೊಡ್ಡ ತಾಂಡಾ ಗ್ರಾಮದಲ್ಲಿ ಅಚ್ಚಪ್ಪ ಗೌಡರ್ ಒಂದು ಸಂಸ್ಥೆಯಿದ್ದಂತೆ. ಹೀಗೆ ಹೇಳುವುದಕ್ಕೆ ತಕ್ಕ ಕಾರಣಗಳಿವೆ. 1999ರಲ್ಲಿ ಶಿಕ್ಷಣ ಇಲಾಖೆಗೆ ಸೇರ್ಪಡೆಗೊಂಡಾಗ ಅವರ ಮೊದಲ ನೇಮಕ ಆಗಿದ್ದು ಈ ಶಾಲೆಗೆ. ಅಂದರೆ, ಅವರು ಇಲ್ಲಿ 18 ವರ್ಷಕ್ಕೂ ಅಧಿಕ ಕಾಲದಿಂದ ಇದ್ದಾರೆ. ಗ್ರಾಮ, ಶಾಲೆ ಹಾಗೂ ಅವರ ಅದೃಷ್ಟ ಇವೆಲ್ಲವೂ ಯಾವುದೋ ಕಟ್ಟುಕತೆಯಲ್ಲಿದ್ದಂತೆ ಒಂದಕ್ಕೊಂದು ಹೆಣೆದುಕೊಂಡಿವೆ. ಅವರ ಹುಟ್ಟಿದೂರು ಇಲ್ಲಿಂದ ಹನ್ನೆರಡು ಕಿಮೀ ದೂರದಲ್ಲಿದ್ದು, ಅಲ್ಲಿ ಅವರಿಗೆ ಹನ್ನೆರಡು ಎಕರೆ ಭೂಮಿಯಿದೆ. ಅದನ್ನು ಅವರ ಸೋದರ ಸಂಬಂಧಿ ನೋಡಿಕೊಳ್ಳುತ್ತಾರೆ.

ಅಚ್ಚಪ್ಪ ಗೌಡರ್ ಅವರ ಸಂಪೂರ್ಣ ಸಮಯ ಹಾಗೂ ಗಮನ ಶಾಲೆಗೆ ಮೀಸಲು. ಹಲವು ವರ್ಷಗಳಿಂದ ವಿದ್ಯಾರ್ಥಿಗಳ ನೋಂದಣಿ ಹೆಚ್ಚಿನ ಏರಿಳಿತಗಳಿಲ್ಲದೆ ಸ್ಥಿರವಾಗಿದೆ. ಅವರು ಶಿಕ್ಷಕರಾಗಿ ಸೇರಿದಾಗ ಮುನ್ನೂರು ಮಕ್ಕಳು ಹಾಗೂ ಐವರು ಶಿಕ್ಷಕರು ಇದ್ದರು. ಈಗ, ಹದಿನೆಂಟು ವರ್ಷಗಳ ಬಳಿಕ ಮುನ್ನೂರ ಐವತ್ತು ಮಕ್ಕಳು ಹಾಗೂ ಐವರು ಶಿಕ್ಷಕರು ಇದ್ದಾರೆ. ಅಚ್ಚಪ್ಪ ಈ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗಲೇ ಮೂವರು ಮುಖ್ಯ ಶಿಕ್ಷಕರು ಬಂದು, ಹೋದರು. ಅವರಿಗೆ ಅಚ್ಚಪ್ಪ ಶಾಲೆಯ ಸುಧಾರಣೆಗೆ ಹಲವು ಸಲಹೆ ನೀಡಿದರು. ಆದರೆ, ಈ ಹಿಂದಿನ ಯಾವ ಮುಖ್ಯ ಶಿಕ್ಷಕರೂ ಅವುಗಳನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಹಿಂದೆ ಇದ್ದವರು ವರ್ಗಾವಣೆಯಾದ ಬಳಿಕ, ಅಕ್ಟೋಬರ್ 2015ರಿಂದ ಅಚ್ಚಪ್ಪ ಹಂಗಾಮಿ ಮುಖ್ಯ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಅಚ್ಚಪ್ಪ ಅವರಿಗೆ ಹಿಂದಿನವರಿಂದ ಬಂದಿದ್ದು ಒಂದು ಹಳೆಯ ಕಟ್ಟಡ – ಒಂದೇ ಸಾಲಿನಲ್ಲಿರುವ ನಾಲ್ಕು ಕೊಠಡಿಗಳು. ಇದರಲ್ಲಿ ಎರಡು ಮಾತ್ರ ಬಳಕೆಗೆ ಯೋಗ್ಯವಾಗಿವೆ (ಉಳಿದ ಎರಡು ಶಿಥಿಲವಾಗಿವೆ): ಬಳಸದೆ ಶೌಚಾಲಯ ಹಾಳಾಗಿದೆ; ಕುಡಿಯುವ ನೀರಿನ ಸೌಕರ್ಯ ಇಲ್ಲ.

ಜುಮಾಲ್ಪುರ ತಾಂಡಾ ಸುರಪುರ ಬ್ಲಾಕ್ ದಕ್ಷಿಣ ಭಾಗದಲ್ಲಿರುವ ಸಣ್ಣ ಹಳ್ಳಿ. ಹತ್ತಿರದ ಪಟ್ಟಣಕ್ಕೆ ಒಂದು ಗಂಟೆ ಪ್ರಯಾಣ ಮಾಡಬೇಕು. ಜಿಲ್ಲಾ ಕೇಂದ್ರವಾದ ಯಾದಗಿರಿ 120 ಕಿಮೀ ದೂರದಲ್ಲಿದೆ. ಜನಸಂಖ್ಯೆಯ ಶೇ.75ರಷ್ಟು ಎಸ್‌ಸಿ ಮತ್ತು ಎಸ್‌ಟಿ ಸಮುದಾಯದವರು. ಸಣ್ಣ ಹಿಡುವಳಿ ಇರುವ ಕೆಲವರನ್ನು ಹೊರತುಪಡಿಸಿದರೆ, ಹೆಚ್ಚಿನವರು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ವರ್ಷದಲ್ಲಿ ಇಂಥ ಕೆಲಸ ಹೆಚ್ಚು ಕಾಲ ಸಿಗುವುದಿಲ್ಲವಾದ್ದರಿಂದ, ತಾಂಡಾದ ಜನರಿಗೆ ಕೂಲಿ ಕೆಲಸ ಅರಸಿಕೊಂಡು ವಲಸೆ ಹೋಗುವುದು ಬಿಟ್ಟರೆ ಬೇರೆ ಆಯ್ಕೆ ಇಲ್ಲ. ಪ್ರತಿ ವರ್ಷ ಹಲವು ತಿಂಗಳು ಬೆಳಗಾವಿ, ಜಮಖಂಡಿ ಮತ್ತು ಬೆಂಗಳೂರು ಮುಂತಾದ ಸ್ಥಳಗಳಿಗೆ ವಲಸೆ ಹೋಗುತ್ತಾರೆ. ಈ ಹಿಂದೆ ಅಕ್ಟೋಬರ್‌ನಿಂದ ಏಪ್ರಿಲ್‌ವರೆಗೆ 350 ವಿದ್ಯಾರ್ಥಿಗಳಲ್ಲಿ 150 ಮಕ್ಕಳು ಮಾತ್ರ ಶಾಲೆಗೆ ಬರುತ್ತಿದ್ದರು. ಉಳಿದವರು ತಮ್ಮ ಪೋಷಕರೊಂದಿಗೆ ಹೋಗಿ ಹಲವು ತಿಂಗಳುಗಳ ಬಳಿಕ ವಾಪಸಾಗುತ್ತಿದ್ದರು. ಇದು ಬಲು ಗೋಜಲಿನ ಸಮಸ್ಯೆಯೇ ಆಗಿತ್ತು. ಸಾಮಾನ್ಯರಿಂದ ಇದಕ್ಕೆ ಪರಿಹಾರ ಸಾಧ್ಯವಿರಲಿಲ್ಲ. ಇದಕ್ಕೆ ಅಚ್ಚಪ್ಪ ಗೌಡರಿಗೆ ಹೊಳೆದ ಪರಿಹಾರವೂ ಅಂತಹುದೇ ಒಂದು ಅಸಾಮಾನ್ಯ ಸಂಗತಿ. ವಲಸೆ ಹೋಗುವ ಪೋಷಕರು ಶಾಲೆಗೆ ಹೋಗುವ ಮಕ್ಕಳನ್ನು ಊರಲ್ಲಿಯೇ ಉಳಿಸಿಕೊಂಡು ಶಾಲೆಯಲ್ಲಿ ವಸತಿ ಒದಗಿಸುವ 'ಹುಚ್ಚು' ಎಂದು ಸಾಮಾನ್ಯರು ವರ್ಣಿಸಬಹುದಾದ ಸಾಹಸಕ್ಕೆ ಕೈಹಾಕಿದರು. ಪೋಷಕರ ಮನ ಒಲಿಸಬೇಕಿದ್ದರೆ ಶಾಲೆಯಲ್ಲಿ ಮಕ್ಕಳಿಗೆ ಉಳಿದುಕೊಳ್ಳಲು ಸುರಕ್ಷಿತವಾದ ಸ್ಥಳದ ಅಗತ್ಯವಿತ್ತು. ಇದಕ್ಕಾಗಿ ಮೊದಲಿಗೆ ಶಾಲೆಯ ಮೂಲ ಸೌಲಭ್ಯದ ದುರಸ್ತಿ ಮತ್ತು ನವೀಕರಣ ಆಗಬೇಕಿತ್ತು. "ನಾನು ಮುಖ್ಯ ಶಿಕ್ಷಕನಲ್ಲ; ತಾತ್ಕಾಲಿಕ ಮುಖ್ಯ ಶಿಕ್ಷಕ" ಎಂದು ಅಚ್ಚಪ್ಪ ಈಗಾಗಲೇ ನಾಲ್ವರು ಸಹೋದ್ಯೋಗಿಗಳ ಮನವೊಲಿಸಿದ್ದರು. ಅವರೆಲ್ಲ ಒಂದು ತಂಡವಾಗಿ ಈ ಕಾರ್ಯದ ಸಾಧನೆಗೆ ಮುನ್ನುಗ್ಗಿದರು.

ಅವರ ಮೊದಲ ಹಂತದ ಕೆಲಸ, ಬೀಳುವ ಸ್ಥಿತಿಯಲ್ಲಿದ್ದ ಕಟ್ಟಡದ ಜಾಗದಲ್ಲಿ ಆಕರ್ಷಕ ಕೊಠಡಿಗಳನ್ನು ಕಟ್ಟುವುದಾಗಿತ್ತು. ಎರಡು ವರ್ಷದ ಮೊದಲು ಇದಕ್ಕಾಗಿ ಅನುದಾನ ಬಿಡುಗಡೆಯಾಗಿದ್ದರೂ ಕಟ್ಟಡ ನಿರ್ಮಾಣ ಕೆಲಸ ಪ್ರಾರಂಭವಾಗದಿದ್ದರಿಂದ ಅನುದಾನ ರದ್ದಾಗಿತ್ತು. ಇದು ಅಚ್ಚಪ್ಪಗೌಡರ ಅಸಮಾಧಾನಕ್ಕೆ ಕಾರಣವಾಗಿತ್ತು. "ನಾನು ಇದನ್ನು ಮಾಡಿಯೇ ತೀರುತ್ತೇನೆ" ಎಂದು ಅಚ್ಚಪ್ಪ ಅಂದು ಶಪಥ ಮಾಡಿದ್ದರು. ಹಂಗಾಮಿ ಮುಖ್ಯ ಶಿಕ್ಷಕರಾದ ಬಳಿಕ ಉಪ ಕಾರ್ಯಕ್ರಮ ಸಂಯೋಜಕರ (ಡೆಪ್ಯುಟಿ ಪ್ರಾಜೆಕ್ಟ್ ಕೋ–ಆರ್ಡಿನೇಟರ್) ಕಚೇರಿಗೆ ಹೋಗಿ, ಮೂರು ಕಟ್ಟಡಗಳಿಗೆ ಮಂಜೂರಾತಿಯನ್ನೂ ಹೊಸ ಅನುದಾನವನ್ನೂ ಪಡೆಯುವಲ್ಲಿ ಸಫಲರಾದರು. ಹಣವನ್ನು ಶಾಲೆಯ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇರಿಸಿ, ಕಾಮಗಾರಿ ಆರಂಭಿಸಲಾಯಿತು. ಶಾಲಾ ಕಟ್ಟಡ ಭದ್ರವೂ ಆಕರ್ಷಕವೂ ಆಗಿರಬೇಕು ಎಂದು ಅಚ್ಚಪ್ಪ ನಿರ್ಧರಿಸಿದ್ದರು. ನಿರ್ಮಾಣ ಕಾಮಗಾರಿಯ ಪ್ರತಿ ಹಂತದ ವೈಯಕ್ತಿಕ ಮೇಲುಸ್ತುವಾರಿಯನ್ನು ಅವರು ವಹಿಸಿದರು. ನೆಲ ಸಮತಟ್ಟುಗೊಳಿಸುವುದರಿಂದ ತೊಡಗಿ ಕಾಮಗಾರಿ ಆರಂಭ ಹಾಗೂ ನಿರ್ಮಾಣ ಕಾರ್ಯ ಪ್ರಗತಿ ಸಾಧಿಸಿದಂತೆ, ಪ್ರತಿದಿನ ಬೆಳಗ್ಗೆ ಎಂಟರಿಂದ ರಾತ್ರಿ ಎಂಟರವರೆಗೆ ಅಚ್ಚಪ್ಪ ಸ್ಥಳದಲ್ಲಿ ಹಾಜರಿರುತ್ತಿದ್ದರು.

ಅವರ ಹದ್ದಿನ ಕಣ್ಣಿನ ಉಸ್ತುವಾರಿಯಿಂದಾಗಿ, ಹಣ ಉಳಿಯಿತು. ಸಾಮಾನ್ಯವಾಗಿ ರೂ. 40,000 ವೆಚ್ಚವಾಗುವ ಕಾಮಗಾರಿ 25,000 ರೂಪಾಯಿಯಲ್ಲೇ ಮುಗಿಯಿತು. ಉಳಿದ ಹಣದಿಂದ ಶೌಚಾಲಯಗಳನ್ನು ದುರಸ್ತಿಗೊಳಿಸಿ, ಬಳಕೆಗೆ ಯೋಗ್ಯವಾಗುವಂತೆ ಮಾಡಲಾಯಿತು. ಜತೆಗೆ, ಈ ಅಸಾಧಾರಣ ಮನುಷ್ಯ ನೀರು ಶೇಖರಣೆಗೆ ಟ್ಯಾಂಕ್ (ಸಿಂಟೆಕ್ಸ್) ಖರೀದಿಗೂ ಹಣ ಉಳಿಸಿದ್ದರು.

ಅನಂತರ, 2016ರ ಶಾಲಾರಂಭದ ದಿನವನ್ನು ಆಕರ್ಷಣೀಯವಾಗಿ ಆಚರಿಸುವ ಕಡೆಗೆ ಅಚ್ಚಪ್ಪ ಗಮನ ಹರಿಸಿದರು. ಹೊಸ ಕಟ್ಟಡ, ನೀರಿನ ಟ್ಯಾಂಕ್ ಹಾಗೂ ದುರಸ್ತಿಗೊಂಡ ಶೌಚಾಲಯಗಳು ಸಮುದಾಯ, ಮಕ್ಕಳು ಹಾಗೂ ಶಿಕ್ಷಕರಲ್ಲಿ ಹೊಸ ಉತ್ಸಾಹ ತುಂಬುತ್ತದೆ ಎನ್ನುವುದು ಅವರಿಗೆ ಗೊತ್ತಿತ್ತು. ಶಾಲೆ ಬಗ್ಗೆ ವಿಶ್ವಾಸ ಹುಟ್ಟಿಸುವಲ್ಲಿ ಇದೊಂದು ಪ್ರಮುಖ ಘಟನೆಯಾಗಲಿದೆ ಎನ್ನುವ ಅವರ ಅನಿಸಿಕೆ ಸರಿಯಾಗಿತ್ತು. ಗುಳೆ ಹೋಗುವಾಗ ನಿಮ್ಮ ಮಕ್ಕಳನ್ನು ನಮ್ಮ ಬಳಿ ಬಿಟ್ಟುಹೋಗಿ ಎಂದು ಪೋಷಕರ ಬಳಿ ಹೇಳುವಂತಹ ಆತ್ಮವಿಶ್ವಾಸ ಅಚ್ಚಪ್ಪನವರಲ್ಲಿ ಮೂಡಿತ್ತು. ಅಚ್ಚಪ್ಪ ಜನರ ಅನುಕೂಲಕರ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು, ಹೊಸ ಯೋಜನೆಯನ್ನು ಘೋಷಿಸಿದರು – 'ವಲಸೆ ಹೋಗುವ ಪೋಷಕರ ಮಕ್ಕಳು ತಂಗಲು ಎರಡು ಕೊಠಡಿಗಳನ್ನು ವಿದ್ಯಾರ್ಥಿ ನಿಲಯದಂತೆ ಬಳಸಲಾಗುತ್ತದೆ.' ಈ ಮಹತ್ವಪೂರ್ಣ ನಿರ್ಧಾರವನ್ನು ಜ್ಞಾಪಿಸಿಕೊಳ್ಳುತ್ತ ಅವರು ಹೇಳುತ್ತಾರೆ, "ತಮ್ಮ ಮಕ್ಕಳ ಸುರಕ್ಷೆ ಹಾಗೂ ಒಳಿತು ಇದರಿಂದ ಸಾಧ್ಯವಾಗಲಿದೆ ಎನ್ನುವ ಖಾತ್ರಿ ಪೋಷಕರಲ್ಲಿ ಉಂಟಾಗಿದ್ದರಿಂದ, ಇದು ಸಾಧ್ಯವಾಯಿತು." ಶಾಲೆಯ ಕೊಠಡಿಗಳಲ್ಲಿ ರಾತ್ರಿ ವೇಳೆ 30 ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾವಕಾಶ ಸಾಧ್ಯವಾಯಿತು. ಉಳಿದ ಮಕ್ಕಳನ್ನು ನೆಂಟರು ಹಾಗೂ ಅಜ್ಜ–ಅಜ್ಜಿ ಬಳಿ ಬಿಟ್ಟು ಹೋಗಬೇಕೆಂದು ಪೋಷಕರ ಮನವೊಲಿಸಿದರು. ಪೋಷಕರು ಬಿಟ್ಟುಹೋದ ಮಕ್ಕಳ ಜವಾಬ್ದಾರಿಯನ್ನು ಹೊರಬೇಕೆಂದು ಸಮುದಾಯವನ್ನು ಅಚ್ಚಪ್ಪ ಪ್ರೇರೇಪಿಸಿದರು. ಆಶ್ಚರ್ಯಕರ ಎನ್ನಿಸಬಹುದಾದರೂ, ಇಂದು ಜುಮಾಲ್ಪುರ ದೊಡ್ಡತಾಂಡಾ ಶಾಲೆಯ 'ವಿದ್ಯಾರ್ಥಿ ನಿಲಯ'ದಲ್ಲಿ ಎಂಟು ಹೆಣ್ಣುಮಕ್ಕಳು ಹಾಗೂ 22 ಬಾಲಕರು ರಾತ್ರಿ ತಂಗುತ್ತಿದ್ದಾರೆ. ಶಾಲೆಯ ಬಿಸಿಯೂಟದ ಅನುದಾನದಲ್ಲೇ ಈ ಮೂವತ್ತು ಮಕ್ಕಳಿಗೆ ರಾತ್ರಿಯೂಟ ಹಾಗೂ ಬೆಳಗ್ಗೆ ತಿಂಡಿ ಕೂಡಾ ನೀಡಲಾಗುತ್ತಿದೆ. ಮೂವರಲ್ಲಿ ಒಬ್ಬರು ಶಿಕ್ಷಕರು 'ವಿದ್ಯಾರ್ಥಿನಿಲಯ'ದಲ್ಲಿ ರಾತ್ರಿ ವೇಳೆ ತಂಗಲಿದ್ದು, ಉಸ್ತುವಾರಿ ಕೆಲಸವನ್ನೂ ರಕ್ಷಣೆ ಜವಾಬ್ದಾರಿಯನ್ನೂ ನೋಡಿಕೊಳ್ಳುತ್ತಾರೆ. ಈ ಪ್ರಯತ್ನಕ್ಕೆ ಮಾರುಹೋದ ಪೋಷಕರು ಹಾಗೂ ಕೆಲವು ಮಂದಿ ಗ್ರಾಮಸ್ಥರು, ಇದಕ್ಕಾಗಿ ಧನಸಹಾಯವನ್ನೂ ನೀಡುತ್ತಿದ್ದಾರೆ.

ಅಚ್ಚಪ್ಪ ಇಷ್ಟಕ್ಕೇ ವಿರಮಿಸಲಿಲ್ಲ. ಜುಮಾಲ್ಪುರ ದೊಡ್ಡ ತಾಂಡಾ ಶಾಲೆಯ ಮಕ್ಕಳು ಉತ್ತಮ ಗುಣಮಟ್ಟದ ಸಮವಸ್ತ್ರ ಧರಿಸಿರುವುದನ್ನು ನಾವೀಗ ನೋಡಬಹುದು. ಇದರ ಹಿಂದೆಯೂ ಒಂದು ಕತೆ ಇದೆ: ಬಿಇಒ ಕಚೇರಿಯು ಪ್ರಮಾಣೀಕೃತ ಸರಬರಾಜುದಾರರ ಮೂಲಕ ಪೂರೈಸುತ್ತಿದ್ದ ಸಮವಸ್ತ್ರವನ್ನು ತೆಗೆದುಕೊಳ್ಳಲು ಅಚ್ಚಪ್ಪ ನಿರಾಕರಿಸಿದರು. ಬದಲಿಗೆ ಸಮವಸ್ತ್ರಕ್ಕೆ ಇಲಾಖೆ ಒದಗಿಸುವ 54,000 ರೂ ಹಣವನ್ನು ಶಾಲೆಯ ಬ್ಯಾಂಕ್ ಖಾತೆಗೆ. ವರ್ಗಾವಣೆಯಾಗುವಂತೆ ಮಾಡಿ, ತಾವೇ ಹೋಗಿ ಉತ್ತಮ ಗುಣಮಟ್ಟದ

ಬಟ್ಟೆ ಖರೀದಿಸಿ ತಂದರು, ಉತ್ತಮ ದರ್ಜಿಯಿಂದ ಸಮವಸ್ತ್ರಗಳನ್ನು ಹೊಲಿಸಿದರು. ಇದೆಲ್ಲವನ್ನೂ ಅವರು ಕಡಿಮೆ ಖರ್ಚಿನಲ್ಲೇ ಮಾಡಿದ್ದರು. ಈ ಪ್ರಕ್ರಿಯೆ ಸಮವಸ್ತ್ರ ಪೂರೈಸುವ 'ಕಮಿಷನ್' ವ್ಯವಸ್ಥೆಯನ್ನು ಅಡಿಮೇಲು ಮಾಡಿತು. ತಮ್ಮ ಈ ಉಪಕ್ರಮದಿಂದ ವಿರೋಧಿಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದೇನೆ ಎನ್ನುವುದು ಅಚ್ಚಪ್ಪ ಅವರಿಗೆ ತಿಳಿದಿತ್ತು; ಅದಕ್ಕೆ ಅವರು ಸೊಪ್ಪು ಹಾಕಲಿಲ್ಲ.

ಶಾಲೆಯಲ್ಲಿ ಹಾಜರಿ ಪ್ರಮಾಣ ಗೌರವಾರ್ಹ ಮಟ್ಟ ತಲಪಿತು. ಅಚ್ಚಪ್ಪ ಅವರ ಮುಂದಿನ ಗುರಿ–ವಿದ್ಯಾರ್ಥಿಗಳ ಕಲಿಕೆ ಮಟ್ಟದ ಸುಧಾರಣೆ. ಇದಕ್ಕಾಗಿ ಅವರು 'ಪರಿಹಾರ ಬೋಧನೆ' (Remedial teaching)ಯನ್ನು ಪ್ರಾರಂಭಿಸಿದ್ದಾರೆ, ಶಾಲೆ ಮುಗಿದ ಬಳಿಕ ಮೂವರು ಶಿಕ್ಷಕರು ವಿಶೇಷ ತರಗತಿ ತೆಗೆದುಕೊಳ್ಳುತ್ತಾರೆ. ಪ್ರತಿ ತರಗತಿಯಲ್ಲೂ ಧ್ವನಿವರ್ಧಕಗಳನ್ನು ಅಳವಡಿಸಿದ್ದು, ರಾಜ್ಯ ಶಿಕ್ಷಣ ಇಲಾಖೆಯ ಕೇಳಿ–ಕಲಿ ರೇಡಿಯೊ ಕಾರ್ಯಕ್ರಮವನ್ನು ಮೂಲ, ಉದ್ದೇಶಿತ ವಿಧಾನದಲ್ಲೇ ಅನುಷ್ಠಾನಗೊಳಿಸಲಾಗಿದೆ. ಕುಷ್ಟಗಿಯ ಶಾಲೆಯೊಂದರಲ್ಲಿ ಇದನ್ನು ಅಳವಡಿಸಿದ್ದು ಅಲ್ಲಿನ ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನಕಾರಿಯಾಗಿರುವುದನ್ನು ತಾನು ನೋಡಿದ್ದೇನೆ, ಆದ್ದರಿಂದಲೇ ಇಲ್ಲೂ ಅಳವಡಿಸಿದೆ ಎಂದು ಅವರು ಹೇಳುತ್ತಾರೆ. ಬೇರೆಯವರಿಂದ ಕಲಿಯುವ, ಉತ್ತಮ ವಿಚಾರ, ವಿಧಾನಗಳನ್ನು ಒಪ್ಪಿಕೊಳ್ಳುವ ಅಚ್ಚಪ್ಪನವರ ವಿನೀತಭಾವ ಈ ಮಾತುಗಳಲ್ಲಿ ಪ್ರತಿಧ್ವನಿಸುತ್ತದೆ: "ನಾನು ಕುಷ್ಟಗಿಯ ಶಾಲೆಗೆ ನೀಡಿದ ಭೇಟಿಗಳಿಂದ ಪ್ರಭಾವಿತನಾಗಿದ್ದೇನೆ. ಗೆದ್ದಲಮರಿ ಜಿಎಚ್‌ಪಿಎಸ್‌ನ ಮುಖ್ಯೋಪಾಧ್ಯಾಯ ಸಂಗಯ್ಯ ಅವರಿಂದ ಪ್ರಭಾವಿತನಾಗಿದ್ದೇನೆ. ಜುಮಾಲ್ಪುರ ದೊಡ್ಡ ತಾಂಡಾದ ಶಾಲೆಯಲ್ಲೂ ಅದೇ ಕೆಲಸ ಮಾಡಲು ಉದ್ದೇಶಿಸಿದ್ದೇನೆ."

ತಾವು ತೆಗೆದುಕೊಂಡ ಕೆಲವು ಕ್ರಮಗಳು ಶಾಶ್ವತವಾದದ್ದೇನೂ ಅಲ್ಲ; ಈ ಶಾಲೆಯಿಂದ ಬೇರೆಡೆಗೆ ಹೋದಾಗ ಅವೆಲ್ಲ ಕರಗಿಹೋಗಬಹುದು ಎಂಬುದೂ ಅಚ್ಚಪ್ಪ ಅವರಿಗೆ ಗೊತ್ತಿದೆ. ಆದರೆ, ತಾವು ಈಗ ಮಾಡಿದ್ದು ಜೀವಮಾನದಲ್ಲೊಮ್ಮೆ ದೊರೆಯುವ ಅವಕಾಶದ ಸದ್ವಿನಿಯೋಗ ಎಂದು ಪರಿಗಣಿಸುತ್ತಾರೆ. ಈ ಮೊದಲು ಎಷ್ಟೇ ಹೇಳಿದರೂ ಅವರ ಮನವಿಯನ್ನೂ ಸಲಹೆಗಳನ್ನೂ ಹಿಂದಿನ ಮುಖ್ಯ ಶಿಕ್ಷಕರು ನಿರ್ಲಕ್ಷಿಸಿದ್ದರು. ಅಚ್ಚಪ್ಪ ಅವರಿಗೆ ಈಗ ದಿನದ ಇಪ್ಪತ್ತನಾಲ್ಕು ಗಂಟೆಯೂ ಅಡ್ಡಿ–ಆತಂಕವಿಲ್ಲದೆ ಕೆಲಸ ಮಾಡಲು ಅವಕಾಶವಿದೆ. ಫೌಂಡೇಷನ್‌ನ ಜೊತೆಗೆ ಅಚ್ಚಪ್ಪ ಅವರ ಸಹಯೋಗ ಕೇವಲ ಐದು ವರ್ಷಗಳದ್ದು. ಈ ಅವಧಿಯಲ್ಲಿ ಅವರ ಮೇಲೆ ಮಾದರಿ ಶಾಲೆಗಳಿಗೆ ಭೇಟಿ ಕಾರ್ಯಕ್ರಮ ಬಹಳಷ್ಟು ಪ್ರಭಾವ ಬೀರಿದೆ "ಕುಷ್ಟಗಿಯ ಶಾಲೆ ಸಾಧಿಸಿದ್ದರಲ್ಲಿ ಕೇವಲ ಶೇ.25ರಷ್ಟು ಮಾತ್ರ ಸಾಧಿಸಲು ಸಾಧ್ಯವಾಗಿದೆ. ನನಗೆ ಇನ್ನೂ ಎರಡು ವರ್ಷ ಸಮಯ ಕೊಟ್ಟರೆ ಜುಮಾಲ್ಪುರ ತಾಂಡಾವನ್ನು ಮಾದರಿ ಶಾಲೆಯನ್ನಾಗಿ ಮಾಡುತ್ತೇನೆ. ಶಾಲೆಯಲ್ಲಿ ಮೂಲಸೌಲಭ್ಯಕ್ಕೆ ಹೆಚ್ಚು ದೇಣಿಗೆ ನೀಡುವಂತೆ ಗ್ರಾಮದ ಸಾಹುಕಾರನನ್ನು ಪ್ರೇರೇಪಿಸಬೇಕಿದೆ. ನಾವು ಈವರೆಗೆ ಮಾಡಿರುವುದು ಜಾದೂ ಅಲ್ಲ: ಸಹೋದ್ಯೋಗಿಗಳ ಕಠಿಣ ಶ್ರಮ ಹಾಗೂ ಸಹಕಾರದಿಂದ ಇದು ಸಾಧ್ಯವಾಗಿದೆ. ನನ್ನ ಮಕ್ಕಳು ಸಂಜೆ ಶಾಲೆಯ ಗಂಟೆ ಹೊಡೆದ ಮೇಲೂ ಮನೆಗೆ ಹೋಗುವುದಿಲ್ಲ. ಇಲ್ಲೇ ಕುಳಿತಿರುತ್ತಾರೆ,

ಆಟವಾಡುತ್ತಾರೆ, ಮನೆಪಾಠ ಮುಗಿಸುತ್ತಾರೆ, ಗಿಡಗಳಿಗೆ ನೀರುಣಿಸುತ್ತಾರೆ." ಫೌಂಡೇಷನ್‌ನ ಸ್ಥಳೀಯ ಪ್ರತಿನಿಧಿ ಹುಲಗಪ್ಪ ಶಾಲಾ ಮೇಳದ ಆಲೋಚನೆಯನ್ನು ಮುಂದಿಟ್ಟಾಗ, ಅಚ್ಚಪ್ಪ ಮೇಳಕ್ಕೆ ತಮ್ಮೆಲ್ಲ ಶಕ್ತಿ ತುಂಬಿದರು. ಕಳೆದ ವರ್ಷ 'ಕಲಿಕಾ ಮೇಳ'ವನ್ನು ಹಮ್ಮಿಕೊಂಡಿದ್ದರು. ಭೂಗೋಳ, ಇತಿಹಾಸ ಹಾಗೂ ಸಾಮಾನ್ಯ ವಿಜ್ಞಾನ ವಿಷಯದಲ್ಲಿ ಕಲಿತಿರುವುದನ್ನು ಮಕ್ಕಳು ಸಮುದಾಯದ ಎದುರು ಪ್ರದರ್ಶಿಸಿದ್ದರು.

ಜುಮಾಲ್ಪುರ ದೊಡ್ಡ ತಾಂಡಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಐದು, ಆರು ಮಕ್ಕಳು ಪ್ರತಿ ವರ್ಷ ಮೊರಾರ್ಜಿ ಶಾಲೆಗೆ ಆಯ್ಕೆಯಾಗುತ್ತಾರೆ. ಇದು ಹೆಚ್ಚಬೇಕು ಎನ್ನುವುದು ಅಚ್ಚಪ್ಪ ಆಶಯ. ನಮ್ಮ ಮಾತುಕತೆ ಸಂದರ್ಭದಲ್ಲಿ "ನನಗೆ ಇನ್ನೆರಡು ವರ್ಷ ಕೊಡಿ" ಎನ್ನುವುದನ್ನು ಮಂತ್ರವೋ ಎನ್ನುವಂತೆ ಅವರು ಹಲವು ಸಲ ಹೇಳಿದರು. ಅಚ್ಚಪ್ಪ ಅವರು ತಮ್ಮ ಬದುಕಿನ ಶ್ರೇಯಸ್ಸಿಗಾಗಿ ಮಾಡಿದ್ದೇನು ಎಂದು ದೊಡ್ಡ ಜುಮಾಲ್ಪುರ ತಾಂಡಾ ಶಾಲೆಯ ಮಕ್ಕಳಿಗೆ ಕೆಲವು ವರ್ಷಗಳ ನಂತರವಷ್ಟೇ ಅರಿವಾಗಲಿದೆ. ಅವರು ಬೆಳೆದು ದೊಡ್ಡವರಾದ ಬಳಿಕವೂ ಈ ಭಯರಹಿತ, ವಿಕ್ಷಿಪ್ತ ಮನುಷ್ಯನನ್ನು ಎಂದೆಂದೂ ಸ್ಮರಿಸುತ್ತಾರೆ.